ನಿಂತುಬಿಟ್ಟ. ಆ ನಂತರ ಉತ್ತರಗಳನ್ನು ನಾನೇ ಆ ವಿದ್ಯಾರ್ಥಿಗಳಿಗೆ ಹೇಳಿಕೊಟ್ಟೆನೆನ್ನಿ.

ಮರುದಿನ ನನ್ನ ಚೇಂಬರಿನಲ್ಲಿ ಹಾಜರಾದ ಆ ಹುಡುಗ 'ನಾನು ಸ್ತ್ರೀ ರೋಗಗಳಿಗೆ ಸಂಬಂಧಿಸಿದ ಪುಸ್ತಕದಲ್ಲಿ ಓದಿದೆ ಸರ್. ಮೂತ್ರಕೋಶದ ಸೋಂಕುಂಟಾದಾಗ ಕೆಲವೊಮ್ಮೆ ಮೂತ್ರದ್ವಾರ ಮುಚ್ಚಿಹೋಗಿ ಯೋನಿದ್ವಾರದ ಮುಖಾಂತರ ಮೂತ್ರ ಹೊರಹೋಗುತ್ತದೆ ಎಂದು ಆ ಪುಸ್ತಕದಲ್ಲಿದೆ' ಎನ್ನುತ್ತಾ ಹಿಂದಿನ ದಿನ ತಾನು ನೀಡಿದ್ದ ಉತ್ತರವನ್ನು ಸಮರ್ಥಿಸಿಕೊಳ್ಳತೊಡಗಿದ. ನಾನು ಅವನ ಬೆನ್ನು ಸವರುತ್ತಾ 'ಅದು ಮಹಿಳೆಯರಲ್ಲಾಗುವ ಸಮಸ್ಯೆ ಕಣಯ್ಯಾ... ನೀನೀಗ ಇರುವುದು ಸ್ತ್ರೀ ರೋಗದ ವಿಭಾಗದಲ್ಲಲ್ಲ; ಮಕ್ಕಳ ವಿಭಾಗದಲ್ಲಿ. ಹೆಚ್ಚು ತಲೆಕೆಡಿಸಿಕೊಳ್ಳಬೇಡ. ಆ ಸಂಗತಿಯನ್ನು ಇಲ್ಲಿಗೇ ಬಿಟ್ಟುಬಿಡು' ಎಂದು ಸಮಾಧಾನ ಹೇಳಿ ಕಳಿಸಿದೆ.

***

ಆಗಷ್ಟೇ ಕೊರೊನಾದ ದೆಸೆಯಿಂದಾದ ಲಾಕ್‌ಡೌನ್ ಅಂತ್ಯಗೊಂಡು ವಿದ್ಯಾರ್ಥಿಗಳು ಆಫ್‌ಲೈನ್ ತರಗತಿಗಳಿಗೆ ಹಾಜರಾಗತೊಡಗಿದ್ದರು. ಲಾಕ್‌ಡೌನ್ ಮತ್ತು ಮಾಸ್ಕ್‌ಗಳ ದೆಸೆಯಿಂದಾಗಿ ಎಷ್ಟೋ ವಿದ್ಯಾರ್ಥಿಗಳ ಮುಖಗಳು ಮತ್ತು ಹೆಸರುಗಳು ಮರೆತುಹೋಗಿದ್ದವು. ಅಂದು ಅಂತಿಮ ಪರೀಕ್ಷೆಗೆ ಹಾಜರಾಗಬೇಕಿದ್ದ ಒಂದು ಬ್ಯಾಚಿನ ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಕೇಸ್ ಡಿಸ್ಕಷನ್‌ನಲ್ಲಿ ತೊಡಗಿಕೊಂಡಿದ್ದೆ. ಪುಟ್ಟ ಪುಟ್ಟ ಗುಂಪುಗಳಾಗಿ ಬರುವುದರಿಂದ ಅಂಥ ತರಗತಿಗಳಲ್ಲಿ ವಿದ್ಯಾರ್ಥಿಗಳೊಂದಿಗಿನ ಒಡನಾಟ ತುಸು ಹೆಚ್ಚೇ ಇರುತ್ತದೆ ಮತ್ತು ಎಷ್ಟೋ ಜನರ ಹೆಸರು, ವಿಳಾಸ, ಅವರ ಹೆಸರಿನ ಅರ್ಥ, ಮಾತೃಭಾಷೆ, ಮುಂತಾದ ಪೂರ್ವಾಪರಗಳನ್ನೂ ವಿಚಾರಿಸಿಕೊಳ್ಳುತ್ತಿರುತ್ತೇನೆ.

ಆ ದಿನ ಕನ್ನಡಿಗಳಾದ ವಿದ್ಯಾರ್ಥಿನಿಯೋರ್ವಳಿಗೆ 'ನಿನ್ನ ಹೆಸರೇನು?' ಎಂದು ಕೇಳಿದೆ. 'ಸಂಜೀವಿನಿ' ಎಂದು ಉಲಿದಳಾಕೆ. 'ಅದರ ಅರ್ಥವೇನು?' ಎಂದು ಅದರ ಬಗ್ಗೆ ಗೊತ್ತೇ ಇಲ್ಲದವನಂತೆ ಮರುಪ್ರಶ್ನೆ ಎಸೆದೆ. 'ಅದು ರಾಮಾಯಣದಲ್ಲಿ ಬರುತ್ತದೆ ಸರ್. ಒಂದು ಸಲ ಲಕ್ಷ್ಮಣನಿಗೆ ಹುಷಾರಿರಲಿಲ್ಲ...' ಎಂದು ಕಥೆ ಹೇಳಲು ಶುರು ಹಚ್ಚಿಕೊಂಡಳು, ಮುಗ್ಧವಾಗಿ ಮತ್ತು ಮುದ್ದುಮುದ್ದಾಗಿ. ಥಟ್ಟನೆ ಅವಳ ಮಾತನ್ನು ತುಂಡರಿಸಿದ ನಾನು 'ಓಹೋ! ಲಕ್ಷ್ಮಣನಿಗೂ ಕೊರೊನಾ ಬಂದುಬಿಟ್ಟಿತ್ತಾ?' ಎಂದುಬಿಟ್ಟೆ. ಮಿಕ್ಕ ವಿದ್ಯಾರ್ಥಿಗಳು ಸೂರು ಹಾರಿಹೋಗುವಂತೆ ನಗತೊಡಗಿದರೆ ಆ ಹುಡುಗಿ ಪೆಚ್ಚಾಗಿ ನಿಂತುಬಿಟ್ಟಳು.

***

ವಾರ್ಡ್‌ನಲ್ಲಿ ರೌಂಡ್ಸ್‌ನಲ್ಲಿದ್ದಾಗಲೊಮ್ಮೆ ಭೇದಿಯಾಗಿರುವ ಮಗುವೊಂದರ ಪಕ್ಕ ನಿಂತು, ಆ ಮಗುವಿನ ನಿಗಾ ವಹಿಸಿಕೊಂಡಿರುವ ಸ್ನಾತಕೋತ್ತರ ವಿದ್ಯಾರ್ಥಿಗೆ ಪ್ರಶ್ನಿಸತೊಡಗಿದ್ದೆ. 'ಎಷ್ಟು ಪ್ರಮಾಣದ ಓ.ಆರ್.ಎಸ್. ನೀಡಬೇಕು ಈ ಮಗುವಿಗೆ?' ಎಂದು ಕೇಳಿದೆ.

'ಪ್ರತಿ ಭೇದಿಯಾದಾಗಲೂ ಮಲದ ರೂಪದಲ್ಲಿ ಸುಮಾರು ನೂರರಿಂದ ಇನ್ನೂರು ಮಿ.ಲೀ.ನಷ್ಟು ನೀರಿನ ನಷ್ಟವಾಗುವುದರಿಂದ ಅಷ್ಟು ನೀರನ್ನು ಓ.ಆರ್.ಎಸ್. ರೂಪದಲ್ಲಿ ನೀಡಬೇಕು' ಎಂಬ ಉತ್ತರವನ್ನು ಆತನಿಂದ ನಿರೀಕ್ಷಿಸಿದ್ದೆ. ಆದರೆ ಅವನು 'ಪ್ರತಿ ಭೇದಿಗೆ ನೂರು ಮಿ.ಲೀ.ಯಷ್ಟು ಓ.ಆರ್.ಎಸ್. ನೀಡಬೇಕು ಸರ್' ಎಂದ. ನಾನು 'ಕರೆಕ್ಟಾಗಿ ಅಷ್ಟೇ ಏಕೆ?' ಎಂದು ಕೇಳಿದೆ. ಅದಕ್ಕೆ ಅವನು 'ಪ್ರತಿ ಮಲದ ತೂಕ ನೂರು ಗ್ರಾಮ್ ಇರುತ್ತದೆ ಸರ್' ಎಂದುಬಿಟ್ಟ. ನಾನು ಥಟ್ಟನೆ 'ಓಹೋ... ತೂಕದ ಯಂತ್ರ ಕೈಯಲ್ಲಿ ಹಿಡಿದುಕೊಂಡು ಮಲವನ್ನು ತೂಕ ಮಾಡಿದ್ದೆಯೇನೋ!' ಎಂದುಬಿಟ್ಟೆ. ಸುತ್ತ ನೆರೆದಿದ್ದ ವಿದ್ಯಾರ್ಥಿಗಳೆಲ್ಲಾ ಪಕಪಕನೆ ನಗತೊಡಗಿದರು.



***

ಈಗೊಂದು ಹದಿನೈದು ವರ್ಷಗಳ ಹಿಂದಿನ ಮಾತು. ವರ್ಷದ ಕೊನೆಯಲ್ಲಿ ನನ್ನ ಕಟ್ಟಕಡೆಯ ಥಿಯರಿ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಕೆಲವು ಉಪದೇಶದ ಮಾತುಗಳನ್ನು ಮತ್ತು ಅವರ ಭವಿಷ್ಯದ ಕುರಿತು ಹಾರೈಕೆಯ ನುಡಿಗಳನ್ನಾಡುವುದು ಅಭ್ಯಾಸ. ಹಾಗೆಯೇ ಅವರಿಗೆ ಮುಜುಗರವಾಗಬಾರದೆಂದು, ತಮ್ಮ ಹೆಸರನ್ನು ನಮೂದಿಸದೆ ನನ್ನ ತರಗತಿಗಳ ಕುರಿತು ಒಂದೆರಡು ಸಾಲುಗಳ ಅಭಿಪ್ರಾಯ ಬರೆದುಕೊಡುವಂತೆ ಅವರಲ್ಲಿ ಕೇಳಿಕೊಳ್ಳುತ್ತಿರುತ್ತೇನೆ. ಹುಡುಗರೆಲ್ಲಾ ಸಿಕ್ಕಿದ್ದೇ ಛಾನ್ಸು ಎಂಬಂತೆ ನನ್ನ ಪಾಠದ ವೈಖರಿ, ನನ್ನ ಧ್ವನಿ, ಕನ್ನಡಾಭಿಮಾನ – ಹೀಗೆ ಇದ್ದಿದ್ದೊಂದು ಇಲ್ಲದ್ದೊಂದು ಸೇರಿಸಿ ಬರೆದುಕೊಡುತ್ತಿರುತ್ತಾರೆ. ಕೆಲವರಂತೂ ಸಂಕ್ಷಿಪ್ತವಾಗಿ ಬರೆಯಿರಿ ಎಂದು ಹೇಳಿದ್ದರೂ ಸಹ ಒಂದು ಮಹಾ ಪ್ರಬಂಧವನ್ನೇ ಬರೆದುಬಿಟ್ಟಿರುತ್ತಾರೆ.

ಅಂದೂ ಸಹ ಆ ವರ್ಷದ ವಿದ್ಯಾರ್ಥಿಗಳು ಬರೆದುಕೊಟ್ಟಿದ್ದ ಅಭಿಪ್ರಾಯಗಳ ಚೀಟಿಗಳನ್ನು ಓದುತ್ತಾ ಕುಳಿತಿದ್ದೆ. ಕಿಲಾಡಿ ವಿದ್ಯಾರ್ಥಿಯೊಬ್ಬನ ಅಭಿಪ್ರಾಯವನ್ನು ಓದುತ್ತಿದ್ದಂತೆ ನನಗೆ ನಗು ಉಕ್ಕಿ ಉಕ್ಕಿ ಬರತೊಡಗಿತು. 'ನೀವು ಬಹಳ ಪಾರ್ಷಿಯಲ್ ಸರ್. ಪಾಠ ಮಾಡುವಾಗ ಯಾವಾಗಲೂ ಹುಡುಗಿಯರನ್ನೇ ನೋಡುತ್ತಿರುತ್ತೀರಿ. ಹುಡುಗರತ್ತ ನೋಡುವುದೇ ಇಲ್ಲ' ಎಂದು ಬರೆದುಬಿಟ್ಟಿದ್ದ ಆ ಭೂಪ!

ಎಷ್ಟೇ ತಂತ್ರಜ್ಞಾನ ಮುಂದುವರಿದಿದ್ದರೂ ಮೊದಲಿನಿಂದಲೂ ಸೀಮೆಸುಣ್ಣ ಕೈಯಲ್ಲಿ ಹಿಡಿದು, ಕಪ್ಪು ಹಲಗೆಯ ಮೇಲೆ ಬರೆಯುತ್ತಾ ಪಾಠ ಮಾಡುವುದೇ ನನಗೆ ಹೆಚ್ಚು ಪ್ರಿಯವಾದದ್ದು. ಆಗೆಲ್ಲಾ ನಾನು ಲೆಕ್ಚರ್ ತರಗತಿಗಳನ್ನು ತೆಗೆದುಕೊಳ್ಳುವಾಗ ಕಪ್ಪು ಹಲಗೆಯ ಎಡ ತುದಿಯಿಂದ ಬರೆಯಲಾರಂಭಿಸಿ ಬಲ ತುದಿಗೆ ಬಂದು ನಿಂತು ವಿವರಿಸಲಾರಂಭಿಸುತ್ತಿದ್ದೆ. ಆಗ ನನಗೆ ಕಾಣುತ್ತಿದ್ದವರು ನನ್ನ ಕಣ್ಣುಗಳಿಗೆ ನೇರವಾಗಿ ಬಲ ಭಾಗದಲ್ಲಿ ಕುಳಿತಿರುತ್ತಿದ್ದ ಹುಡುಗಿಯರು. ಈ ಸಂಗತಿಯನ್ನು ಎಷ್ಟು ದಿನಗಳಿಂದ ಗಮನಿಸಿದ್ದನೋ ಆ ನನ್ನ ಪಟ್ಟ ಶಿಷ್ಯ, 'ಸ್ತ್ರೀ ಪರ' ಎಂಬ ಗುರುತರವಾದ ಆರೋಪವನ್ನು ನನ್ನ ಮೇಲೆ ಹೊರಿಸಿಬಿಟ್ಟಿದ್ದ! ಅವನ ಆ ಅಭಿಪ್ರಾಯದಿಂದ ಎಚ್ಚೆತ್ತುಕೊಂಡ ನಾನು, ಆ ನಂತರದ ಬ್ಯಾಚುಗಳಿಗೆ ಪಾಠ ಮಾಡುವಾಗ ಪ್ರಜ್ಞಾಪೂರ್ವಕವಾಗಿ ಆಗಾಗ ಹುಡುಗರತ್ತಲೂ ನೋಟ ಹೊರಳಿಸುವುದನ್ನು ರೂಢಿಸಿಕೊಂಡೆನೆನ್ನಿ.

ಪ್ರತಿಕ್ರಿಯಿಸಿ: **feedback@sudha.co.in**